77. **ಮೊಹರುಗಳಿಗೆ ಮತ್ತು ಲೆಕ್ಕ ನೀಡದಿರುವ ದಾಸ್ತಾನುಗಳಿಗೆ ಸಂಬಂಧಿಸಿದ ದಂಡಗಳ.**– (1) ಯಾವೊಬ್ಬ ವ್ಯಕ್ತಿಯು, ಅವನು, 52ನೇ ಪ್ರಕರಣದ (1)ನೇ ಉಪ–ಪ್ರಕರಣದ (ಎಫ್) ಖಂಡದ ಮತ್ತು 53ನೇ ಪ್ರಕರಣದ (4)ನೇ ಉಪ–ಪ್ರಕರಣದ ಉಪಬಂಧಗಳ ಅಡಿಯಲ್ಲಿ ಹಾಕಲಾದ ಒಂದು ಮೊಹರನ್ನು ತೆಗೆದರೆ ಅಥವಾ ಯಾವುದೇ ಬಗೆಯಲ್ಲಿ ಕೆಡಿಸಿದರೆ, ಅವನು, ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟರ ನ್ಯಾಯಾಲಯಕ್ಕೆ ಕಡಿಮೆಯಲ್ಲದ ದರ್ಜೆಯ ಒಂದು ನ್ಯಾಯಾಲಯದಿಂದ ಅಪರಾಧ ನಿರ್ಣಯವಾದ ಮೇಲೆ ಐದು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ, ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರದ ಜುಲ್ಮಾನೆಯಿಂದ ಮತ್ತು ಒಂದು ವರ್ಷಕ್ಕೆ ಮೀರದ ಅವಧಿಯ ಕಾರಾವಾಸ ಶಿಕ್ಷೆಗೆ ಬದ್ಧನಾಗಿರತಕ್ಕದ್ದು.

ಅನುಬಂಧ – 3

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)

ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 21)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು 2009ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 1932ರ ಮೈಸೂರು ಅಧಿನಿಯಮ IXರ ತಿದ್ದುಪಡಿ.– ಮೈಸೂರು ಜೂಜು ತೆರಿಗೆ ಅಧಿನಿಯಮ, 1932ರ (1932ರ ಮೈಸೂರು ಅಧಿನಿಯಮ IX)ರಲ್ಲಿ,

(1) 6ನೇ ಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"6. ಜೂಜು ತೆರಿಗೆ.– (1) ರಾಜ್ಯದೊಳಗೆ ಅಥವಾ ರಾಜ್ಯದ ಹೊರಗೆ ಅದೇ ರೇಸು ಕೋರ್ಸಿನಲ್ಲಿ ಅಥವಾ ಇತರ ಯಾವುದೇ ರೇಸು ಕೋರ್ಸಿನಲ್ಲಿ ಓಡಿಸಲಾಧ ಯಾವುದೇ ರೇಸು ಪಂದ್ಯದ ಮೇಲೆ ಒಬ್ಬ ಲೈಸೆನ್ಸುದಾರನಾದ ಬುಕ್ ಮೇಕರನ ಮೂಲಕ ಮೈಸೂರು ರೇಸುಕೋರ್ಸುಗಳ ಲೈಸೆನ್ಸು ನೀಡಿಕೆ ಅಧಿನಿಯಮ, 1952ರ (1952ರ ಮೈಸೂರು ಅಧಿನಿಯಮ VIII) ಉಪಬಂಧಗಳಿಗನುಸಾರವಾಗಿ ಲೈಸೆನ್ಸುದಾರನು ಪ್ರತ್ಯೇಕವಾಗಿ ಇರಿಸಿದ ಒಳಾವರಣದಲ್ಲಿ ಬ್ಯಾಕರುಗಳು ಕಟ್ಟಿದ ಪಣಗಳ ಮೇಲೆ ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಪೂರ್ವಾನ್ವಯವಾಗಿ ಅಥವಾ ಉತ್ತರಾನ್ವಯವಾಗಿ ನಿರ್ದಿಷ್ಟಪಡಿಸಬಹುದಾದ ಒಂದು ರೇಸು ಕೂಟದ ಪ್ರತಿ ದಿನಕ್ಕಾಗಿ ಐವತ್ತುಸಾವರ ರೂಪಾಯಿಗಳನ್ನು ಮೀರದ ಒಂದು ದರದಲ್ಲಿ ಇಲ್ಲಿ ಇನ್ನು ಮುಂದೆ ಜೂಜು ತೆರಿಗೆ ಎಂದು ಕರೆಯಲಾಗುವ ಒಂದು ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

(2) (1)ನೇ ಉಪಪ್ರಕರಣಟದ ಅಡಿಯಲ್ಲಿ ವಿಧಿಸಲಾದ ಜೂಜು ತೆರಿಗೆಯನ್ನು ಲೈಸೆನ್ಸು ಹೊಂದಿದ ಪ್ರತಿಯೊಬ್ಬ ಬುಕ್ ಮೇಕರ್‌ನು ಸಂದಾಯ ಮಾಡತಕ್ಕದ್ದು."

(2) 7ನೇ ಪ್ರಕರಣಕ್ಕೆ, ಈ ಮುಂದಿನವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"7. ಜೂಜು ತೆರಿಗೆಯ ಸಂದಾಯ.– ಪ್ರತಿಯೊಬ್ಬ ಲೈಸೆನ್ಸು ಹೊಂದಿದ ಬುಕ್‌ಮೇಕರ್‌ನು 6ನೇ ಪ್ರಕರಣದಡಿಯಲ್ಲಿ ವಿಧಿಸಿದ ಜೂಜು ತೆರಿಗೆಯನ್ನು, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ ನಿಯಮಿಸಬಹುದಾದಂಥ ನಮೂನೆಯ ಮತ್ತು ರೀತಿಯ ವಿವರ ಪಟ್ಟಿಯ ಸಮೇತ ಸಂದಾಯ ಮಾಡತಕ್ಕದ್ದು."

3. 1958ರ ಕರ್ನಾಟಕ ಅಧಿನಿಯಮ 30ರ ತಿದ್ದುಪಡಿ.– ಕರ್ನಾಟಕ ಮನೋರಂಜನಾ ಅಧಿನಿಯಮ, 1958ರಲ್ಲಿ (1958ರ ಕರ್ನಾಟಕ ಅಧಿನಿಯಮ 30).

(1) 3ನೇ ಪ್ರಕರಣದಲ್ಲಿ,

(ಎ) (1)ನೇ ಉಪಪ್ರಕರಣದಲ್ಲಿ, (ಬಿ) ಖಂಡದಲ್ಲಿ, "ಶೇಕಡ 40" ಎಂಬ ಪದ ಮತ್ತು ಅಂಕಿಗಳಿಗೆ, "ಶೇಕಡ 30" ಎಂಬ ಪದ ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) (1–ಎ) ಉಪಪ್ರಕರಣಗಳಲ್ಲಿ, ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ.–

"ಮತ್ತೂ ಪರಂತು ಮಾಲೀಕತ್ವದ ಕ್ರೀಡಾ ತಂಡಗಳನ್ನು ಒಳಗೊಂಡಿರುವ ಅಂದರೆ ಬಹುಮಾನದ ಹಣಕ್ಕಾಗಿ ಆಟವಾಡುವುದು ಮತ್ತು ವಾಣಿಜ್ಯ ಆಧಾರದ ಮೇಲೆ ಪಂದ್ಯ ಏರ್ಪಡಿಸುವ ಆಟ ಅಥವಾ ಕ್ರಿಡೆಗೆ, ಪ್ರವೇಶದ ಟಿಕೇಟ್ ಮೇಲೆ ತೆರಿಗೆಗೆ ಮೊದಲನೇ ಪರಂತುಕದಡಿಯಲ್ಲಿ ವಿನಾಯಿತಿ ನೀಡತಕ್ಕದ್ದಲ್ಲ."

(2) 4–ಜಿ ಪ್ರಕರಣದಲ್ಲಿ. "ಸ್ವೀಕರಿಸಿದ ಮೊಬಲಗುಗಳು" ಎಂಬ ಪದಗಳ ತರುವಾಯ "ಅಥವಾ ಸ್ವೀಕರಿಸಬಹುದಾದುವುಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(3) 6–ಎ ಪ್ರಕರಣದಲ್ಲಿ, (4)ನೇ ಉಪ ಪ್ರಕರಣದಲ್ಲಿ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(5) ಮಾಲೀಕನು (1)ನೇ ಉಪ ಪ್ರಕರಣದಡಿಯಲ್ಲಿ ನಿಯಮಿಸಲಾದ ಒಂದು ಅವಧಿಗೆ ವಿವರ ಪಟ್ಟಿಯನ್ನು ಸಲ್ಲಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯ ತರುವಾಯ ಈ ಪ್ರಕರಣದಡಿಯಲ್ಲಿ ಆ ನಿಯಮಿಸಲಾದ ಅವಧಿಗೆ ಯಾವ ತೆರಿಗೆಯ ನಿರ್ಧರಣೆಯನ್ನೂ ಮಾಡತಕ್ಕದ್ದಲ್ಲ;

ಪರಂತು, ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2009 ಪ್ರಾರಂಭದ ಪೂರ್ವದಲ್ಲಿ ಕೊನೆಗೊಂಡ ಯಾವುದೇ ನಿಯಮಿಸಲಾದ ಅವಧಿಗೆ ಸಂಬಂಧಪಟ್ಟ ಹಾಗೆ ಪ್ರಾರಂಭವಾಗುವುದಕ್ಕೆ ಪೂರ್ವದಲ್ಲೇ (1)ನೇ ಉಪ ಪ್ರಕರಣದಡಿಯಲ್ಲಿ ಅದಕ್ಕೆ ಸಂಬಂಧಪಟ್ಟ ವಿವರಪಟ್ಟಿಕೆಯನ್ನು ಸಲ್ಲಿಸಲಾಗಿರುವ ಒಂದು ತೆರಿಗೆ ನಿರ್ಧರಣೆಯ ವ್ಯವಹಾರಣೆಗಳನ್ನು ಅಂಥ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಮುಕ್ತಾಯಗೊಳಿಸತಕ್ಕದ್ದು:

ಮತ್ತು ಪರಂತು, ಆಯುಕ್ತರು ಪ್ರಕರಣಗಳನ್ನು ಅನಿಯತವಾಗಿ ಆಯ್ಕೆ ಮಾಡಿ ತೆರಿಗೆ ನಿರ್ಧರಣೆ ಮಾಡಲು ನಿರ್ದೇಶಿಸಬಹುದು:

ಅಲ್ಲದೇ ಪರಂತು, ಈ ಉಪಪ್ರಕರಣದಲ್ಲಿ ತೆರಿಗೆ ನಿರ್ಧರಣೆ ಮಾಡಬಹುದಾದ ಅವಧಿಯನ್ನು ಮಿತಿಗೊಳಿಸುವ ಯಾವುದೂ, 8–ಬಿ, 8–ಸಿ, 8–ಡಿ ಅಥವಾ 8–ಇ ಪ್ರಕರಣದಡಿಯಲ್ಲಿ ಮಾಡಲಾದ ಯಾವುದೇ ನಿರ್ಣಯಗಳು, ನಿರ್ದೇಶನಗಳು ಅಥವಾ ಆದೇಶಗಳಿಗೆ ಅಥವಾ ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು ಅಥವಾ ಆದೇಶದ ಪರಿಣಾಮವಾಗಿ ಕೈಗೊಂಡ ಅಥವಾ ಅವುಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಮಾಡಿದ ಒಂದು ತೆರಿಗೆ ನಿರ್ಧರಣೆಗೆ ಅನ್ವಯವಾಗತಕ್ಕದ್ದಲ್ಲ.

(6) ಈ ಪ್ರಕರಣದಡಿ ತೆರಿಗೆ ನಿರ್ಧರಣೆಗಾಗಿ ಕಾಲಮಿತಿಯನ್ನು ಲೆಕ್ಕ ಹಾಕುವಲ್ಲಿ.

(ಎ) ಯಾವುದೇ ನ್ಯಾಯಾಲಯವು ಅಥವಾ ಯಾವುದೇ ಇತರ ಪ್ರಾಧಿಕಾರವು ನೀಡಿದ ಯಾವುದೇ ತಡೆಯಾಜ್ಞೆಯ ಕಾರಣದಿಂದ ಪ್ರಶ್ನೆಯಲ್ಲಿರುವ

ತೆರಿಗೆ ನಿರ್ಧರಣೆಯನ್ನು ಮುಂದಕ್ಕೆ ಹಾಕಲಾದ ಅವಧಿಯನ್ನು ಹೊರತುಪಡಿಸತಕ್ಕದ್ದು;

(ಬಿ) ಯಾವುದೇ ಪ್ರಕರಣ ಅಥವಾ ಪ್ರಕರಣಗಳ ವರ್ಗಗಳ ಸಂಬಂಧದಲ್ಲಿ ಜಂಟಿ ಆಯುಕ್ತರು ಕಾರಣಗಳನ್ನು ಬರೆದು ದಾಖಲಿಸಿ ತೆರಿಗೆ ನಿರ್ಧರಣೆಯನ್ನು ಮುಂದಕ್ಕೆ ಹಾಕಲಾದ ಅವಧಿಯನ್ನು ಹೊರತುಪಡಿಸತಕ್ಕದ್ದು.

(7) ಈ ಪ್ರಕರಣದಡಿಯಲ್ಲಿನ ಒಂದು ತೆರಿಗೆ ನಿರ್ಧರಣೆಯನ್ನು (5)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯೊಳಗೆ ಮುಕ್ತಾಯಗೊಳಿಸದಿದ್ದರೆ, ಮಾಲೀಕನು ತನ್ನ ವಿವರ ಪಟ್ಟಿಕೆಯಲ್ಲಿ ಘೋಷಿಸಿರುವ ಕಾಂಪ್ಲಿಮೆಂಟರಿ ಟಿಕೇಟುಗಳನ್ನು ಮತ್ತು ಪ್ರವೇಶ ಟಿಕೇಟುಗಳಿಗಾಗಿ ಸಂದಾಯಗಳನ್ನು, ಆ ವಿವರ ಪಟ್ಟಿಕೆಯ ಆಧಾರದ ಮೇಲೆ ಆ ನಿಯಮಿಸಲಾದ ಅವಧಿಗಾಗಿ ತೆರಿಗೆ ನಿರ್ಧರಣೆ ಮಾಡಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಯಾವುದೇ ಮನೋರಂಜನೆಗಾಗಿ ಕಾಂಪ್ಲಿಮೆಂಟರಿ ಟಿಕೇಟು ಅಥವಾ ಪ್ರವೇಶಕ್ಕಾಗಿ ಸಂದಾಯವು ತೆರಿಗೆ ನಿರ್ಧರಣೆಯಿಂದ ತಪ್ಪ ಹೋಗಿರುವ ಸಂದರ್ಭದಲ್ಲಿ ತೆರಿಗೆ ನಿರ್ಧರಣೆ ಮಾಡುವುದಕ್ಕೆ, ಸಂದಾಯ ಮತ್ತು ವಸೂಲಿಗೆ, ಅಪೀಲು ಮತ್ತು ಪುನರೀಕ್ಷಣೆಗೆ ಸಂಬಂಧಪಟ್ಟ ಈ ಅಧಿನಿಯಮದ ಉಪಬಂಧಗಳು ಅಂಥ ಭಾವಿತ ನಿರ್ಧರಣೆಗೆ ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯಿಸತಕ್ಕದ್ದು.

(8) ಈ ಪ್ರಕರಣದಲ್ಲಿ ಏನೇ ಇದ್ದರೂ, ಸರ್ಕಾರವು, ಯಾವುದೇ ನಿಯಮಿಸಲಾದ ಅವಧಿಗೆ ಯಾವುದೇ ನಿರ್ದಿಷ್ಟ ವರ್ಗದ ಮಾಲೀಕರ ಸಂಬಂಧದಲ್ಲಿ ಮಾಡಲಾದ ತೆರಿಗೆ ನಿರ್ಧರಣೆಯನ್ನು ಮಾಲೀಕನು ಹಾಜರಾಗಬೇಕೆಂದು ಅಥವಾ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ಹಾಜರುಪಡಿಸಬೇಕೆಂದು ಅಗತ್ಯಪಡಿಸದೇ (1)ನೇ ಉಪಪ್ರಕರಣದಡಿಯಲ್ಲಿ ಸಲ್ಲಿಸಲಾದ ವಿವರಪಟ್ಟಿಕೆಯ ಆಧಾರದ ಮೇಲೆ ಮಾಡಲಾಗಿದೆಯೆಂದು ಭಾವಿಸಬೇಕೆಂದು, ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಅಧಿಸೂಚಿಸಬಹುದು.

(4) 8–ಇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"8–ಎಫ್. ಕೆಲವು ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯದಿಂದ ಪುನರೀಕ್ಷಣೆ.– (1) 8–ಇ ಪ್ರಕರಣದ (5) ಅಥವಾ (7) ಅಥವಾ (8)ನೇ ಉಪ ಪ್ರಕರಣದ ಅಡಿಯಲ್ಲಿನ ಆದೇಶವನ್ನು ತನಗೆ ತಿಳಿಸಿದ ದಿನಾಂಕದಿಂದ ಒಂದುನೂರಾ ಎಂಭತ್ತು ದಿನಗಳೊಳಗೆ ಅಪೀಲುದಾರನು ಅಥವಾ ಪ್ರತ್ಯರ್ಜಿದಾರನು ಆ ಆದೇಶದ ವಿರುದ್ಧ, ಅಪೀಲು ನ್ಯಾಯಾಧಿಕರಣವು ಯಾವುದೇ ಕಾನೂನಿನ ಪ್ರಶ್ನೆಯನ್ನು ತೀರ್ಮಾನಿಸಲು ವಿಫಲವಾಗಿದೆ ಅಥವಾ

ಅದನ್ನು ದೋಷಪೂರ್ಣವಾಗಿ ತೀರ್ಮಾನಿಸಿದೆ ಎಂಬ ಕಾರಣದ ಮೇಲೆ ಉಚ್ಚ ನ್ಯಾಯಾಲಯಕ್ಕೆ ಪುನರೀಕ್ಷಣಾ ಅರ್ಜಿ ಸಲ್ಲಿಸಬಹುದು.

(2) ಒಂದುನೂರಾ ಎಂಭತ್ತು ದಿನಗಳ ಅವಧಿಯೊಳಗೆ ಅರ್ಜಿದಾರನು ಅರ್ಜಿಯನ್ನು ಸಲ್ಲಿಸದಿರುವುದಕ್ಕೆ ಸಾಕಷ್ಟು ಕಾರನ ಇತ್ತೆಂದು ಉಚ್ಚ ನ್ಯಾಯಾಲಯಕ್ಕೆ ಮನವರಿಕೆಯಾದರೆ, ಹಿಂದೆ ಹೇಳಿದ ಅಂಥ ಅವಧಿಯ ತರುವಾಯ ಸಲ್ಲಿಸಿದ ಅರ್ಜಿಯನ್ನೂ ಅಂಗೀಕರಿಸಬಹುದು.

(3) ಅರ್ಜಿಯು, ನಿಯಮಿಸಲಾದ ನಮೂನೆಯಲ್ಲಿ ಇರತಕ್ಕದ್ದು, ನಿಯಮಿಸಲಾದ ರೀತಿಯಲ್ಲಿ ಅದನ್ನು ಸತ್ಯಾಪನೆ ಮಾಡಿರತಕ್ಕದ್ದು ಮತ್ತು 8–ಇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು ಪ್ರಾಧಿಕೃತಗೊಳಿಸಿದ ಅಧಿಕಾರಿಯಲ್ಲದ ಯಾವೊಬ್ಬ ವ್ಯಕ್ತಿಯ ಅದನ್ನು ಸಲ್ಲಿಸಿದಾಗ, ಒಂದುನೂರು ರೂಪಾಯಿಗಳ ಶುಲ್ಕವು ಅದರ ಜೊತೆಗೆ ಇರಿಸತಕ್ಕದ್ದು.

(4) ಉಚ್ಚ ನ್ಯಾಯಾಲಯವು ಅರ್ಜಿಯನ್ನು ಪರಿಶೀಲಿಸಿದ ಮೇಲೆ, ತಾನು ಮಧ್ಯ ಪ್ರವೇಶಿಸಲು ಸಾಕಷ್ಟು ಕಾರಣಗಳು ಇಲ್ಲವೆಂದು ಪರಿಗಣಿಸಿದರೆ, ಅದು ಆ ಅರ್ಜಿಯನ್ನು ಕ್ಷಿಪ್ರವಾಗಿ ವಜಾ ಮಾಡಬಹುದು.

(5) ಉಚ್ಚ ನ್ಯಾಯಾಲಯವು, ಅರ್ಜಿದಾರನಿಗೆ ಯಾವುದೇ ಅರ್ಜಿಯನ್ನು ಸಮರ್ಥಿಸಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ಹೊರತು, ಅದನ್ನು ವಜಾ ಮಾಡತಕ್ಕದ್ದಲ್ಲ.

(6) (ಎ) ಉಚ್ಚನ್ಯಾಯಾಲಯವು ಆ ಅರ್ಜಿಯನ್ನು ಕ್ಷಿಪ್ರವಾಗಿ ವಜಾ ಮಾಡದಿದ್ದರೆ, ಆ ಅರ್ಜಿಯ ಉಭಯ ಪಕ್ಷಕಾರರಿಗೆ ತಮ್ಮ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ಕೊಟ್ಟ ತರುವಾಯ, ಎತ್ತಲಾದ ಕಾನೂನಿನ ಪ್ರಶ್ನೆ ಅಥವಾ ಪ್ರಶ್ನೆಗಳನ್ನು ಅದು ನಿರ್ಧರಿಸತಕ್ಕದ್ದು ಮತ್ತು ಯಾವ ಆದೇಶದ ವಿರುದ್ಧ ಅರ್ಜಿಯನ್ನು ಸಲ್ಲಿಸಲಾಗಿತ್ತೋ ಆ ಆದೇಶವನ್ನು ವಿಪರ್ಯಯಗೊಳಿಸತಕ್ಕದ್ದು, ಸ್ಥಿರೀಕರಿಸತಕ್ಕದ್ದು ಅಥವಾ ತಿದ್ದುಪಡಿ ಮಾಡತಕ್ಕದ್ದು ಅಥವಾ ಎತ್ತಲಾದ ಕಾನೂನಿನ ಪ್ರಶ್ನೆ ಅಥವಾ ಪ್ರಶ್ನೆಗಳ ಮೇಲೆ ಉಚ್ಚ ನ್ಯಾಯಾಲಯದ ಅಭಿಪ್ರಾಯದೊಂದಿಗೆ ಆ ವಿಷಯವನ್ನು ಅಪೀಲು ನ್ಯಾಯಾಧಿಕರಣಕ್ಕೆ ಹಿಂದಕ್ಕೆ ಕಳುಹಿಸತಕ್ಕದ್ದು ಅಥವಾ ಉಚ್ಚ ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸುವಂಥ ಇತರ ಆದೇಶವನ್ನು ಆ ವಿಷಯಕ್ಕೆ ಸಂಬಂಧಿಸಿದಂತೆ ಮಾಡತಕ್ಕದ್ದು.

(ಬಿ) ಉಚ್ಚ ನ್ಯಾಯಾಲಯವು (ಎ) ಖಂಡದ ಅಡಿಯಲ್ಲಿ ಎತ್ತಲಾದ ಕಾನೂನಿನ ಪ್ರಶ್ನೆಗಳ ಮೇಲೆ ತನ್ನ ಅಭಿಪ್ರಾಯಗಳೊಂದಿಗೆ ವಿಷಯವನ್ನು ಅಪೀಲು ನ್ಯಾಯಾಧಿಕರಣಕ್ಕೆ ಹಿಂದಕ್ಕೆ

ಕಳುಹಿಸಿರುವಲ್ಲಿ, ಅಪೀಲು ನ್ಯಾಯಾಧಿಕರಣವು ಅಂಥ ಅಭಿಪ್ರಾಯಕ್ಕೆ ಸರಿ ಹೊಂದುವಂತೆ ತಾನು ಮಾಡಿದ ಆದೇಶವನ್ನು ತಿದ್ದುಪಡಿ ಮಾಡತಕ್ಕದ್ದು.

(7) ಮೇಲಿನ (6)ನೇ ಉಪ ಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡುವುದಕ್ಕೆ ಮೊದಲು, ಉಚ್ಚ ನ್ಯಾಯಾಲಯವು ಅರ್ಜಿಯನ್ನು ಅಪೀಲು ನ್ಯಾಯಾಧಿಕರಣಕ್ಕೆ ಹಿಂದಕ್ಕೆ ಕಳುಹಿಸುವುದು ಅವಶ್ಯವೆಂದು ಭಾವಿಸಿದರೆ ಅದು ಹಾಗೆ ಮಾಡಬಹುದು ಮತ್ತು ಯಾವುದೇ ನಿರ್ದಿಷ್ಟ ಪ್ರಶ್ನೆ ಅಥವಾ ವಿವಾದಾಂಶದ ಮೇಲೆ ತನ್ನ ನಿರ್ಣಯದೊಂದಿಗೆ ಅರ್ಜಿಯನ್ನು ಹಿಂದಿರುಗಿಸುವಂತೆ ಅದಕ್ಕೆ ನಿರ್ದೇಶಿಸಬಹುದು.

(8) ಮೆಲಿನ (1)ನೇ ಉಪ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾಗ್ಯೂ ಆ ಸಂಬಂಧದಲ್ಲಿ ಮಾಡಿದ ತೆರಿಗೆ ನಿರ್ಧರಣೆಗೆ ಅನುಸಾರವಾಗಿ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

(9) ಅರ್ಜಿಯ ಪರಿಣಾಮವಾಗಿ ಅಂಥ ತೆರಿಗೆ ನಿರ್ಧರಣೆಯಲ್ಲಿ ಯಾವುದೇ ಬದಲಾವಣೆಯು ಅವಶ್ಯವಾದರೆ, ಉಚ್ಚನ್ಯಾಯಲಯವು ತೆರಿಗೆ ನಿರ್ಧರಣೆಯನ್ನು ತಿದ್ದುಪಡಿ ಮಾಡಲು ನಿಯಮಿಸಲಾದ ಪ್ರಾಧಿಕಾರವನ್ನು ಪ್ರಾಧಿಕಾರವನ್ನು ಪ್ರಾಧಿಕೃತಗೊಳಿಸಬಹುದು ಮತ್ತು ನಿಯಮಿಸಲಾದ ಪ್ರಾಧಿಕಾರವು, ತದನುಸಾರವಾಗಿ ತೆರಿಗೆ ನಿರ್ಧರಣೆಯನ್ನು ತಿದ್ದುಪಡಿ ಮಾಡತಕ್ಕದ್ದು ಮತ್ತು ಆ ತರುವಾಯ ಸಂಬಂಧಪಟ್ಟ ವ್ಯಕ್ತಿಯು ಹೆಚ್ಚಿಗೆಯಾಗಿ ಸಂದಾಯ ಮಾಡಿದ್ದ ಮೊಬಲಗನ್ನು ಅವನಿಗೆ ಬಡ್ಡಿ ಇಲ್ಲದೆ ಮರು ಪಾವತಿ ಮಾಡತಕ್ಕದ್ದು ಅಥವಾ ಸಂದರ್ಭಾನುಸಾರ ಅವನಿಂದ ಬಾಕಿ ಇರುವ ತೆರಿಗೆಯ ಹೆಚ್ಚಿನ ಮೊಬಲಗನ್ನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಸಂಗ್ರಹಿಸತಕ್ಕದ್ದು.

(10) (ಎ) ಉಚ್ಚ ನ್ಯಾಯಾಲಯವು, ಅರ್ಜಿಯ ಇಬ್ಬರು ಪಕ್ಷಕಾರರಲ್ಲಿ ಯಾರೊಬ್ಬರು ಹಾಕಿಕೊಂಡ ಅರ್ಜಿಯ ಮೇಲೆ (6)ನೇ ಉಪ ಪ್ರಕರಣದ ಅಡಿಯಲ್ಲಿ ತಾನು ಮಾಡಿದ ಯಾವುದೇ ಆದೇಶವನ್ನು, ಆ ಆದೇಶವನ್ನು ಮಾಡಿದಾಗ ತನ್ನ ಮುಂದೆ ಇದ್ದಿರದಂಥ ಸಂಗತಿಗಳ ಆಧಾರದ ಮೇಲೆ ಪುನರಾವಲೋಕಿಸಬಹುದು.

(ಬಿ) ಪುನರಾವಲೋಕನೆಗಾಗಿನ ಅರ್ಜಿಯನ್ನು ನಿಯಮಿಸಬಹುದಾದಂಥ ಸಮಯದೊಳಗೆ ಮತ್ತು ಅಂಥ ರೀತಿಯಲ್ಲಿ ಸಲ್ಲಿಸತಕ್ಕದ್ದು, ಮತ್ತು 8–ಇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು, ಅಧಿಕಾರ ನೀಡಿದ ಅಧಿಕಾರಿಯಲ್ಲದ ಯಾವೊಬ್ಬ ವ್ಯಕ್ತಿಯು ಅದನ್ನು ಸಲ್ಲಿಸಿರುವಲ್ಲಿ ಅದರೊಡನೆ ಒಂದನೂರು ರೂಪಾಯಿಗಳ ಶುಲ್ಕ ಇರತಕ್ಕದ್ದು.

(11) (ಎ) ದಾಖಲೆಯಿಂದ ಕಂಡುಬರುವ ಯಾವುದೇ ತಪ್ಪನ್ನು ಸರಿಪಡಿಸುವ ದೃಷ್ಟಿಯಿಂದ ಉಚ್ಚ ನ್ಯಾಯಾಲಯವು (6)ನೇ ಉಪ ಪ್ರಕರಣದ ಅಡಿಯಲ್ಲಿ ತಾನು ಹೊರಡಿಸಿದ ಆದೇಶದ ದಿನಾಂಕದಿಂದ ಐದು ವರ್ಷಗಳೊಳಗೆ ಯಾವುದೇ ಕಾಲದಲ್ಲಿ ಅಂಥ ಆದೇಶವನ್ನು ತಿದ್ದುಪಡಿ ಮಾಡಬಹುದು.

(ಬಿ) ಉಚ್ಚನ್ಯಾಯಾಲಯವು, ಆದೇಶದಿಂದ ಬಾಧಿತರಾದ ಉಭಯ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ಹೊರತು ಈ ಉಪಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(12) ಮೇಲಿನ (1)ನೇ ಅಥವಾ (10)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಪ್ರತಿಯೊಂದು ಅರ್ಜಿಗೆ ಸಂಬಂಧಿಸಿದ ಖರ್ಚುಗಳ ಬಗ್ಗೆ ತೀರ್ಮಾನ ಉಚ್ಚನ್ಯಾಯಾಲಯದ ವಿವೇಚನಾನುಸಾರವಾಗಿರತಕ್ಕದ್ದು."

4. 1976ರ ಅಧಿನಿಯಮ 35ರ ತಿದ್ದುಪಡಿ.– ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರಲ್ಲಿ (1976ರ ಕರ್ನಾಟಕ ಅಧಿನಿಯಮ 35).–

(1) 5ನೇ ಪ್ರಕರಣದಲ್ಲಿ, (4)ನೇ ಉಪ–ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(5) ನೋಂದಣಿ ಅಥವಾ ಹೆಸರು ದಾಖಲಾತಿ ಮಾಡಿಕೊಳ್ಳಲು ಹೊಣೆಗಾರನಾದ ಒಬ್ಬ ನಿಯೋಜಕ ಅಥವಾ ಒಬ್ಬ ವ್ಯಕ್ತಿಯು ನಿರ್ದಿಷ್ಟ ಅವಧಿಯೊಳಗೆ ಅಂಥ ನೋಂದಣಿಗಾಗಿ ಅಥವಾ ಹೆಸರು ದಾಖಲಾತಿಗಾಗಿ ಅರ್ಜಿ ಸಲ್ಲಿಸಲು ವಿಫಲನಾದಲ್ಲಿ, ತೆರಿಗೆ ನಿರ್ಧರಣೆ ಪ್ರಾಧಿಕಾರಿಯು, ಅವನಿಗೆ ತನ್ನ ಅಹವಾಲವನ್ನು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ನೀಡಿದ ತರುವಾಯ, ನಿಯೋಜಕನ ಸಂದರ್ಭದಲ್ಲಿ ಒಂದು ಸಾವಿರ ರೂಪಾಯಿಗಳ ಮತ್ತು ಇತರ ಯಾವುದೇ ವ್ಯಕ್ತಿಯ ಸಂದರ್ಭದಲ್ಲಿ ಐದು ನೂರು ರೂಪಾಯಿಗಳ ದಂಡವನ್ನು ವಿಧಿಸತಕ್ಕದ್ದು."

(2) 6–ಎ ಪ್ರಕರಣದಲ್ಲಿ, (3)ನೇ ಉಪ–ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(4) ಒಬ್ಬ ನಿಯೋಜಕನು ಈ ಅಧಿನಿಯಮದಲ್ಲಿ ಅಗತ್ಯಪಡಿಸಲಾದಂತೆ ನಿಯಮಿಸಲಾದ ನಮೂನೆಯಲ್ಲಿ ವಿವರ ತ:ಖ್ತೆಯನ್ನು ಒದಗಿಸಲು ವಿಫಲನಾದಲ್ಲಿ ಅಥವಾ ಒದಗಿಸಲಾದ ಯಾವುದೇ ವಿವರ ತ:ಖ್ತೆಯ ಮೇಲೆ 'ಬಾಕಿಯಿರುವ ತೆರಿಗೆಯನ್ನು ಸಂದಾಯ ಮಾಡಲು ವಿಫಲನಗಿರುವಲ್ಲಿ, ತೆರಿಗೆ ನಿರ್ಧರಣೆ ಪ್ರಾಧಿಕಾರಿಯು, ಆತನಿಗೆ ತನ್ನ ಅಹವಾಲು ಹೇಳಿಕೊಳ್ಳಲು ಸಮಂಜಸ

ಅವಕಾಶವನ್ನು ನೀಡಿದ ತರುವಾಯ, ಇನ್ನೂರ ಐವತ್ತು ರೂಪಾಯಿಗಳ ದಂಡವನ್ನು ವಿಧಿಸತಕ್ಕದ್ದು."

(3) 7ನೇ ಪ್ರಕರಣದಲ್ಲಿ,

(ಎ) (1)ನೇ ಉಪ–ಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2009, ಜಾರಿಗೆ ಬರುವುದಕ್ಕೆ ಪೂರ್ವದಲ್ಲಿ ಅಸ್ತತ್ವದಲ್ಲಿದ್ದ (2)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಈ ಮುಂದಿನ ಸಂದರ್ಭಗಳನ್ನು ಹೊರತುಪಡಿಸಿ 2008ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭವಾದ ಯಾವುದೇ ವರ್ಷದಲ್ಲಿ ಪ್ರತಿಯೊಬ್ಬ ನಿಯೋಜಕನನ್ನು 6ನೇ ಪ್ರಕರಣದಡಿಯಲ್ಲಿ ಆತನು ದಾಖಲು ಮಾಡಿದ ವಿವರ ಪಟ್ಟಿಕೆಯ ಆಧಾರದ ಮೇಲೆ ತೆರಿಗೆ ನಿರ್ಧರಣೆಯನ್ನು ಮಾಡಲಾಗಿದೆಯೆಂದು ಭಾವಿಸತಕ್ಕದ್ದು. ಅಯುಕ್ತರು, ನಿಯೋಜಕನಿಗೆ ಆತನು ಯಾವುದೇ ವರ್ಷಕ್ಕಾಗಿ ದಾಖಲು ಮಾಡಿದ ವಿವರಪಟ್ಟಿಕೆಗೆ ಬೆಂಬಲವಾಗಿ ಲೆಕ್ಕಪತ್ರಗಳನ್ನು ತೆರಿಗೆ ನಿರ್ಧರಣೆ ಪ್ರಾಧಿಕಾರಿಯ ಮುಂದೆ ಹಾಜರುಪಡಿಸಬೇಕೆಂದು ಅಗತ್ಯಪಡಿಸಿ ನೋಟೀಸನ್ನು ನೀಡಿರುವ ಸಂದರ್ಭದಲ್ಲಿ ಅಂಥ ತೆರಿಗೆ ನಿರ್ಧರಣೆ ಪ್ರಾಧಿಕಾರಿಯು ಅಂಥ ವ್ಯಾಪಾರಿಯ ತೆರಿಗೆ ನಿರ್ಧರಣೆಯನ್ನು,–

(ಎ) ಆತನು ಸಲ್ಲಿಸಿದ ವಿವರ ಪಟ್ಟಿಕೆಯು ಸರಿಯಾಗದೆ ಮತ್ತು ಪರಿಪೂರ್ಣವಾಗಿದೆ ಎಂದು ತನಗೆ ಮನದಟ್ಟಾದರೆ, ವಿವರ ಪಟ್ಟಿಕೆಯ ಆಧಾರದ ಮೇಲೆ ಮಾಡತಕ್ಕದ್ದು.

(ಬಿ) ತನ್ನ ಅತ್ಯುತ್ತಮ ನಿರ್ಣಯದ ಪ್ರಕಾರ ಸಲ್ಲಿಸಿದ ವಿವರಪಟ್ಟಿಕೆಯು ಸರಿಯಾಗಿಲ್ಲ ಅಥವಾ ಪರಿಪೂರ್ಣವಾಗಿಲ್ಲ ಎಂದು ಕಂಡುಬಂದರೆ, ನಿಯೋಜಕನಿಗೆ ಬರಹದಲ್ಲಿ ಆ ತೆರಿಗೆ ನಿರ್ಧರಣೆಯ ವಿರುದ್ಧ ಕಾರಣವನ್ನು ತೋರಿಸಿಕೊಡಲು ಅವಕಾಶವನ್ನು ನೀಡಿದ ತರುವಾಯ ತೆರಿಗೆ ನಿರ್ಧರಣೆಯನ್ನು ಮಾಡತಕ್ಕದ್ದು.

(ಬಿ) (2)ನೇ ಉಪ ಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2009, ಜಾರಿಗೆ ಬರುವುದಕ್ಕೆ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಈ ಪ್ರಕರಣದಲ್ಲಿ ಏನೇ ಇದ್ದರೂ, ಸರ್ಕಾರವು, ಯಾವುದೇ ವರ್ಷಕ್ಕಾಗಿ ಯಾವುದೇ ನಿರ್ದಿಷ್ಟ ವರ್ಗದ ನಿಯೋಜಕರಿಗಾಗಿ ಮಾಡಲಾದ ತೆರಿಗೆ ನಿರ್ಧರಣೆಯನ್ನು ನಿಯೋಜಕನು ಹಾಜರಾಗಬೇಕೆಂದು ಅಥವಾ ನಿಯೋಜಕನ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ಹಾಜರುಪಡಿಸಬೇಕೆಂದು ಅಗತ್ಯಪಡಿಸದೇ (1)ನೇ ಉಪಪ್ರಕರಣದಡಿಯಲ್ಲಿ ಸಲ್ಲಿಸಲಾದ ವಿವರಪಟ್ಟಿಕೆಯ ಆಧಾರದ ಮೇಲೆ

ಮಾಡಲಾಗಿದೆಯೆಂದು ಭಾವಿಸಬೇಕೆಂದು, ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಅಧಿಸೂಚಿಸಬಹುದು.

(4) 21ನೇ ಪ್ರಕರಣದಲ್ಲಿ, "ಯಾವುದೇ ಪ್ರಾಧಿಕಾರವು" ಎಂಬ ಪದಗಳ ತರುವಾಯ "ಅಥವಾ ಆಯುಕ್ತರಿಂದ ಸಾಮಾನ್ಯವಾಗಿ ಅಥವಾ ನಿರ್ದಿಷ್ಟವಾಗಿ ಅಧಿಕೃತನಾದ ಯಾವೊಬ್ಬ ಅಧಿಕಾರಿಯು" ಎಂಬ ಪದಗಳನ್ನು ಸೇರಿಸತಕ್ಕದ್ದು.

(5) 26ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ, "ತೆರಿಗೆ ನಿರ್ಧರಣೆ ಪ್ರಾಧಿಕಾರಿ" ಎಂಬ ಪದಗಳ ತರುವಾಯ "ಅಥವಾ 21ನೇ ಪ್ರಕರಣದಡಿಯಲ್ಲಿ ಅಧಿಕೃತನಾದ ಅಧಿಕಾರಿಯು" ಎಂಬ ಪದಗಳನ್ನು ಸೇರಿಸತಕ್ಕದ್ದು.

(6) ಅನುಸೂಚಿಯಲ್ಲಿ, ಕ್ರಮಸಂಖ್ಯೆ 1ರಲ್ಲಿ, (2)ನೇ ಅಂಕಣದಲ್ಲಿ,–

(ಎ) (ಬಿ) ಬಾಬಿಗೆ ಸಂಬಂಧಿಸಿದ ನಮೂದುಗಳನ್ನು ಮತ್ತು (3)ನೇ ಅಂಕಣದಲ್ಲಿ ಇರುವ ಸಂವಾದಿ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) (ಸಿ) ಬಾಬಿಗೆ ಸಂಬಂಧಿಸಿದ ನಮೂದುಗಳನ್ನು ಮತ್ತು (3)ನೇ ಅಂಕಣದಲ್ಲಿ ಇರುವ ಸಂವಾದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

5. 1979ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.– ಕರ್ನಾಟಕ ಭೋಗವಸ್ತುಗಳ ಮೇಲೆ ತೆರಿಗೆ ಅಧಿನಿಯಮ, 1979ರಲ್ಲಿ (1979ರ ಕರ್ನಾಟಕ ಅಧಿನಿಯಮ 22),–

(1) 3ನೇ ಪ್ರಕರಣದಲ್ಲಿ (1)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ.–

(1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಒಂದು ಹೋಟೆಲಿನಲ್ಲಿ ಪ್ರತಿಯೊಂದು ಕೊಠಡಿಗೆ ಸಂಬಂಧಿಸಿದಂತೆ, ಒದಗಿಸಿದ ಭೋಗವಸ್ತುಗಳ ಮೇಲೆ ಈ ಕೆಳಕಂಡ ದರಗಳಲ್ಲಿ (ಭೋಗವಸ್ತುಗಳ ಮೇಲಿನ ತೆರಿಗೆ ಎಂದು ಕರೆಯಲಾಗುವ) ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು, ಎಂದರೆ:–

ಕ್ರಮ ಸಂಖ್ಯೆ	ದರಗಳು	ತೆರಿಗೆ ದರ
ಎ	ಪ್ರತಿಯೊಂದು ದಿನಕ್ಕೆ ಪ್ರತಿಯೊಂದು ಕೊಠಡಿಗೆ ವಸತಿಗಾಗಿ ವಿಧಿಸುವ ದರಗಳು ಐದು ನೂರು ರೂಪಾಯಿಗಳಿಗಿಂತ ಕಡಿಮೆಯಿಲ್ಲದೆ ಒಂದು ಸಾವಿರ ರೂಪಾಯಿಗಳನ್ನು ಮೀರದೇ ಇರುವಲ್ಲಿ	ಅಂಥ ದರಗಳ ಶೇಕಡ ನಾಲ್ಕು
ಬಿ	ಪ್ರತಿಯೊಂದು ದಿನಕ್ಕೆ ಪ್ರತಿಯೊಂದು ಕೊಠಡಿಗೆ ವಸತಿಗಾಗಿ ವಿಧಿಸುವ ದರಗಳು ಒಂದು ಸಾವಿರ ರೂಪಾಯಿಗಳನ್ನು ಮೀರಿದ್ದು ಎರಡು ಸಾವಿರ	ಅಂಥ ದರಗಳ ಶೇಕಡ ಆರು

	ರೂಪಾಯಿಗಳನ್ನು ಮೀರದೇ ಇರುವಲ್ಲಿ	
ಸಿ	ಪ್ರತಿಯೊಂದು ದಿನಕ್ಕೆ ಪ್ರತಿಯೊಂದು ಕೊಠಡಿಗೆ ವಸತಿಗಾಗಿ ವಿಧಿಸುವ ದರಗಳು ಎರಡು ಸಾವಿರ ರೂಪಾಯಿಗಳನ್ನು ಮಿರಿದ್ದಲ್ಲಿ	ಅಂಥ ದರಗಳ ಶೇಕಡ ಹತ್ತು

(2) 3–ಬಿ ಪ್ರಕರಣದಲ್ಲಿ, "ಶೇಕಡ ಇಪ್ಪತ್ತು" ಎಂಬು ಪದಗಳಿಗೆ "ಶೇಕಡ ಹತ್ತು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(3) 3–ಸಿ ಪ್ರಕರಣದಲ್ಲಿ "ಶೇಕಡ ಇಪ್ಪತ್ತು" ಎಂಬ ಪದಗಳಿಗೆ "ಶೇಕಡ ಹತ್ತು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(4) 4ನೇ ಪ್ರಕರಣದಲ್ಲಿ, (3)ನೇ ಉಪಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(3) ಯಾವುದೇ ವ್ಯಕ್ತಿಗೆ ಹೋಟೆಲ್‌ನಲ್ಲಿ ಒದಗಿಸಿದ ಭೋಗ ವಸ್ತುಗಳಿಗಾಗಿ ವಿಧಿಸಿದ ದರಗಳನ್ನು ರಿಯಾಯಿತಿ ದರದಲ್ಲಿ ವಿಧಿಸಿದ್ದರೆ, ಹಾಗೆ ಕಡಿಮೆ ದರವನ್ನು ಸಾಧಾರಣವಾಗಿ ಎಲ್ಲರಿಗೂ ನೀಡಲಾದ ಯಾವುದೇ ರಿಯಾಯಿತಿಯ ಫಲವಾಗಿ ನೀಡಿದ್ದರೆ ಅಥವಾ ಒಂದು ನಿರ್ದಿಷ್ಟ ಪ್ರಕರಣದಲ್ಲಿ ಮಾಡಿಕೊಂಡ ಕರಾರು ಅಥವಾ ಒಪ್ಪಂಧದ ನಿಬಂಧನೆಗಳ ಪ್ರಕಾರ ನೀಡಿದ್ದರೆ ಮತ್ತು ಅಂಥ ರಿಯಾಯಿತಿ ದರವನ್ನು ದರಪಟ್ಟಿ ಕಾರ್ಡುಗಳಲ್ಲಿ ಪ್ರಕಟಿಸಿದ್ದರೆ ಅಥವಾ ಮಾಹಿತಿಗಾಗಿ ಇನ್ನಾವುದೇ ರೀತಿಯಲ್ಲಿ ಬರಹದಲ್ಲಿ ಪ್ರದರ್ಶಿಸಿದ್ದರೆ ಅಥವಾ ಬಹಿರಂಗ ಪಡಿಸಿದ್ದರೆ, ಅಂಥ ಭೋಗ ವಸ್ತುಗಳ ಮೇಲಣ ತೆರಿಗೆಯನ್ನು ಆ ಕಡಿಮೆ ದರಗಳ ಮೇಲೆ ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

(5) 12–ಎ ಪ್ರಕರಣದಲ್ಲಿ, "ನಿರ್ದಿಷ್ಟ ವರ್ಗದ ಹೋಟೆಲುಗಳು" ಎಂಬ ಪದಗಳಿಗೆ "ನಿರ್ದಿಷ್ಟ ವರ್ಗದ ಹೋಟೆಲುಗಳು, ಕಲ್ಯಾಣ ಮಂಟಪಗಳು, ಕ್ಲಬ್‌ಗಳು ಮತ್ತು ಆಸ್ಪತ್ರೆಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಜಾರಿಗೊಳಿಸಲು ಕರ್ನಾಟಕ ಜೂಜು ತೆರಿಗೆ ಅಧಿನಿಯಮ, 1932, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958, ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ 1976 ಮತ್ತು ಕರ್ನಾಟಕ ಭೋಗ ವಸ್ತುಗಳ ಮೇಲಣ ತೆರಿಗೆ ಅಧಿನಿಯಮ 1979 ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ಅನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಅದ್ದರಿಂದ, ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಎಸ್.ಜಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಪ್ರತ್ಯಾಯೋಜಿತ ಶಾಸನ ರಚನೆಗೆ ಸಂಬಂಧಿಸಿದ ಜ್ಞಾಪನ ಪತ್ರ

ಖಂಡ 2(1)– ಖಂಡ 2(1)ರಡಿಯಲ್ಲಿ ಪ್ರತ್ಯಾಯೋಜಿಸಲು ಉದ್ದೇಶಿಸಿದ ಕರ್ನಾಟಕ ಜೂಜು ತೆರಿಗೆ ಅಧಿನಿಯಮ, 1932ರ 6ನೇ ಪ್ರಕರಣದ (1)ನೇ ಉಪ ಪ್ರಕರಣವು ಕುದರೆ ರೇಸಿನ ಮೇಲೆ ಲೈಸೆನ್ಸು ಹೊಂದಿದ ಬುಕ್‌ಮೇಕರ್‌ಗಳು ಸಂದಾಯ ಮಾಡಬೇಕಾದ ಜೂಜು ತೆರಿಗೆಯ ದರವನ್ನು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 2(2)– ಖಂಡ 2(2)ರಡಿಯಲ್ಲಿ ಪ್ರತ್ಯಾಯೋಜಿಸಲು ಉದ್ದೇಶಿಸಿದ ಕರ್ನಾಟಕ ಜೂಜು ತೆರಿಗೆ ಅಧಿನಿಯಮ, 1932ರ 7ನೇ ಪ್ರಕರಣವು ಲೈಸೆನ್ಸ್‌ನ್ನು ಹೊಂದಿದ ಬುಕ್ ಮೇಕರ್‌ಗಳು ಜೂಜು ತೆರಿಗೆಯನ್ನು ಸಂದಾಯ ಮಾಡಬೇಕಾದ ಕಾಲಮಿತಿಯನ್ನು ಮತ್ತು ಅವರುಗಳು ಸಲ್ಲಿಸಬೇಕಾದ ವಿವರಪಟ್ಟಿಕೆಗಳ ನಮೂನೆ ಮತ್ತು ವಿಧಾನಗಳನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 3(3)– ಖಂಡ 3(3)ರಡಿಯಲ್ಲಿ ಸೇರಿಸಲು ಉದ್ದೇಶಿಸಿದ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958ರ 6–ಎ ಪ್ರಕರಣದ (8)ನೇ ಉಪಪ್ರಕರಣವು ಯಾವ ವರ್ಗದ ಮಾಲೀಕರು ಸಲ್ಲಿಸಿದ ವಿವರಪಟ್ಟಿಕೆಗಳನ್ನು ಅವರ ಹಾಜರಾತಿಯಿಲ್ಲದೇ ಅಥವಾ ಲೆಕ್ಕಪತ್ರಗಳ ಪುಸ್ತಕಗಳನ್ನು ಮಂಡಿಸದೇ ಅನುಮೋದಿಸಲಾಗಿದೆ ಎಂದು ಭಾವಿಸಬಹುದೋ

ಆ ವರ್ಗವನ್ನು ಅಧಿಸೂಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ4(3)(ಎ)– ಖಂಡ 4(3)(ಎ)ರಡಿಯಲ್ಲಿ ಪ್ರತ್ಯಾಯೋಜಿಸಲು ಉದ್ದೇಶಿಸಿದ ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರ 7ನೇ ಪ್ರಕರಣದ (1)ನೇ ಉಪಪ್ರಕರಣವು ವಾರ್ಷಿಕ ವಿವರಪಟ್ಟಿಕೆಗಳ ಸಲ್ಲಿಕೆಯ ಸಂದರ್ಭದಲ್ಲಿ ಯಾವ ವರ್ಗದ ನೌಕರರು ಅವುಗಳಿಗೆ ಬೆಂಬಲವಾಗಿ ಲೆಕ್ಕಪತ್ರಗಳನ್ನು ಮಂಡಿಸಬೇಕೋ ಆ ನೌಕರರ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುತ್ತದೆ.

ಖಂಡ4(3)(ಬಿ)– ಖಂಡ 4(3)(ಬಿ)ರ ಅಡಿಯಲ್ಲಿ ಪ್ರತ್ಯಾಯೋಜಿಸಲು ಉದ್ದೇಶಿಸಿದ ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರ 7ನೇ ಪ್ರಕರಣದ (2)ನೇ ಉಪಪ್ರಕರಣವು ಯಾವ ನೌಕರ ವರ್ಗವು ಸಲ್ಲಿಸಿದ ವಿವರಪಟ್ಟಿಕೆಗಳನ್ನು ಅವರ ಹಾಜರಾತಿಯಿಲ್ಲದೇ ಅಥವಾ ಲೆಕ್ಕಪತ್ರಗಳ ಪುಸ್ತಕಗಳನ್ನು ಮಂಡಿಸದೇ ಅನುಮೋದಿಸಲಾಗಿದೆ ಎಂಬು ಭಾವಿಸಬಹುದೋ ಆ ನೌಕರರ ವರ್ಗವನ್ನು ಅಧಿಸೂಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 4(4) – ಖಂಡ 4(4)ರಡಿಯಲ್ಲಿ ಪ್ರತ್ಯಾಯೋಜಿಸಲು ಉದ್ದೇಶಿಸಿದ ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರ 21ನೇ ಪ್ರಕರಣವು ತೆರಿಗೆ ತಪ್ಪಿಸಿಕೊಂಡಿದ್ದಾರೆಯೇ ಎಂಬುದನ್ನು ಪರಿಶೀಲಿಸಲು ಯಾವುದೇ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳನ್ನು ನಿರ್ವಹಿಸುವ ಆವರಣವನ್ನು ಪರಿಶೀಲಿಸುವುದಕ್ಕಾಗಿ ಪ್ರಾಧಿಕಾರಗಳನ್ನು ಅಧಿಕೃತಗೊಳಿಸಲು ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾ ಅಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಅನುಬಂಧ

ಮೈಸೂರು ಜೂಜು ತೆರಿಗೆ ಅದಿನಿಯಮ, 1932 (1932ರ ಮೈಸೂರು ಅಧಿನಿಯಮ ಸಂಖ್ಯೆ: IX)ರ ಉದ್ಧೃತ ಭಾಗ.

6. ಜೂಜು ತೆರಿಗೆ.– ಮೈಸೂರು ರೇಸುಕೋರ್ಸುಗಳ ಲೈಸೆನ್ಸುಗಳ ಅಧಿನಿಯಮ, 1952ರ ಉಪಬಂಧಗಳಿಗನುಸಾರವಾಗಿ ಲೈಸೆನ್ಸ್ ಹೊಂದಿರುವವನು ಜೂಜಿನ ಸಂಬಂಧದಲ್ಲಿ ಪ್ರತ್ಯೇಕವಾಗಿ ಇರಿಸಿದ ಒಂದು ಅಡಕದಲ್ಲಿ ಬ್ಯಾಕರನು ಲೈಸೆನ್ಸು ಹೊಂದಿ ಬುಕ್‌ಮೇಕರನಿಗೆ ಸಂದಾಯ ಮಾಡಿದ ಅಥವಾ ಸಂದಾಯ ಮಾಡುವುದಾಗಿ ಒಪ್ಪಿಕೊಂಡಿರುವ ಎಲ್ಲಾ ಹಣದಿಂದ, ಒಂದೇ ರೇಸುಕೋರ್ಸಿನ ಮೇಲೆ ಓಡಿರಲಿ ಅಥವಾ ರಾಜ್ಯದೊಳಗೆ ಅಥವಾ ರಾಜ್ಯದ ಹೊರಗಿನ ಯಾವುದೇ ಇತರ ರೇಸುಕೋರ್ಸಿನ ಮೇಲೆ ಓಡಿರುವ ಯಾವುದೇ ರೇಸಿನ ಮೇಲೆ, ಇನ್ನು ಮುಂದೆ ಜೂಜು ತೆರಿಗೆ ಎಂದು ಕರೆಯಲಾಗುವ ಒಂದು ತೆರಿಗೆಯನ್ನು, ಈ ಬಗ್ಗೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಎಲ್ಲ ಅಂಥ ಹಣಕ್ಕೆ ಶೇಕಡ ಇಪ್ಪತ್ತೈದಕ್ಕೆ ಮೀರದ ದರದಲ್ಲಿ, ರಾಜ್ಯ ಸರ್ಕಾರಕ್ಕೆ ಚಾರ್ಜು ಮಾಡತಕ್ಕದ್ದು, ವಿಧಿಸತಕ್ಕದ್ದು ಮತ್ತು ಸಂದಾಯ ಮಾಡತಕ್ಕದ್ದು.

(2) ಲೈಸೆನನ್ಸುಹೊಂದಿ ಬುಕ್ ಮೇಕರನು ಬ್ಯಾಕರನು ಹಣ ಸಂದಾಯ ಮಾಡಿದ ಅವಧಿಯಲ್ಲಿ ಅಂಥ ಹಣದಿಂದ, ಅಥವಾ ಸಾಲದ ಜೂಜುಗಳ ಪ್ರಕರಣದಲ್ಲಿ ನಿಯಮಿಸಬಹುದಾದಂಥ ಕಾಲಕ್ಕೆ ಜೂಜು ತೆರಿಗೆಯನ್ನು ಕಡಿತಗೊಳಿಸತಕ್ಕದ್ದು ಅಥವಾ ಸಂಗ್ರಹಿಸತಕ್ಕದ್ದು, ತೆರಿಗೆ ಲೆಕ್ಕದಲ್ಲಿ ಬ್ಯಾಕರನು ಸಂದಾಯ ಮಾಡಿದ್ದಾರೆ ಎಂದು ಭಾವಿಸತಕ್ಕದ್ದು ಮತ್ತು ರಾಜ್ಯ ಸರ್ಕಾರದ ಪರವಾಗಿ ಲೈಸೆನ್ಸು ಹೊಂದಿದ ಬುಕ್‌ಮೇಕರನು ಅದನು ಇಟ್ಟುಕೊಳ್ಳತಕ್ಕದ್ದು.

7. ರಾಜ್ಯ ಸರ್ಕಾರಕ್ಕೆ ಜೂಜು ತೆರಿಗೆಯನ್ನು ನೀಡುವುದಕ್ಕಾಗಿ ಇರುವ ಕಾರ್ಯ ವಿಧಾನ.– ಲೈಸೆನ್ಸು ಹೊಂದಿದ ಬುಕ್‌ಮೇಕರನು ಜೂಜು ತೆರಿಗೆಯ ಲೆಕ್ಕದಲ್ಲಿ ಇಟ್ಟುಕೊಂಡಿರುವ ಮೊಬಲಗುಗಳನ್ನು, ಯಾರು ಹಾಗೆ ಇಟ್ಟುಕೊಂಡಿರುವವರೋ, ಅವರಿಂದ ನಿಯಮಿಸಲಾದ ಅಧಿಕಾರಿಗೆ ನಿಯಮಿಸಬಹುದಾದಂಥ ಅವಧಿಯಲ್ಲಿ ಮತ್ತು ಅಂಥ ವಿಧಾನದಲ್ಲಿ ಸಲ್ಲಿಸತಕ್ಕದ್ದು.

XX XX XX

ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958ರ (1958ರ ಕರ್ನಾಟಕ ಅಧಿನಿಯಮ, 30)ರ ಉದ್ಧೃತ ಭಾಗ.

XX XX XX

3. ಮನೋರಂಜನೆಗಳಿಗೆ ಪ್ರವೇಶಕ್ಕಾಗಿ ಸಂದಾಯ ಮಾಡುವ ಹಣದ ಮೇಲೆ ತೆರಿಗೆ.– (1) ಮನೋರಂಜನೆಗೆ ಪ್ರವೇಶಕ್ಕಾಗಿ ತೆರಿಗೆ ಮೊಬಲಗನ್ನು ಹೊರತುಪಡಿಸಿ ಮಾಡಿದ ಪ್ರತಿಯೊಂದು ಹಣ ಸಂದಾಯದ ಮೇಲೆ ಈ ಮುಂದಿನಂತೆ ಮನೋರಂಜನೆ ತೆರಿಗೆಯನ್ನು ವಿಧಿಸತಕ್ಕದ್ದು. ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು,–

(ಎ) 2ನೇ ಪ್ರಕರಣದ (ಇ) ಖಂಡದ (i)ನೇ ಉಪ ಖಂಡದಲ್ಲಿ ನಿರ್ದಿಷ್ಟಪಡಿಸಲಾದಂತೆ ಅಂಥ ಸಂದಾಯದ ಶೇಕಡ 70, ಮತ್ತು

(ಬಿ) 2ನೇ ಪ್ರಕಣದ (ಇ) ಖಂಡದ (ii)ನೇ ಉಪ ಖಂಡದಲ್ಲಿ ನಿರ್ದಿಷ್ಟಪಡಿಸಲಾದಂತೆ ಅಂಥ ಸಂದಾಯದ ಶೇಕಡ 40.

XX XX XX

(1–ಎ) ಯಾವ ಮನೋರಂಜನೆಯ ಮೇಲೆ, 4–ಇ ಅಥವಾ 4–ಎಫ್ ಪ್ರಕರಣಟದಡಿಯಲ್ಲಿ ತೆರಿಗೆಯನ್ನು ವಿಧಿಸಲಾಗುತ್ತಿದೆಯೋ ಆ ಮನೋರಂಜನೆಯನ್ನು ಹೊರತುಪಡಿಸಿ 2ನೇ ಪ್ರಕರಣದ (ಇ) ಖಂಡದ (iii) ನೇ ಉಪ ಖಂಡದಲ್ಲಿ ಉಲ್ಲೇಖಿಸಲಾದ ಮನೋರಂಜನೆಗಳ ಸಂಭಂಧದಲ್ಲಿ, ಅಂಥ ಮನೋರಂಜನೆಯ ಪ್ರವೇಶಕ್ಕಾಗಿ ಆ ಮನೋರಂಜನೆಗೆ ವಿಧಿಸುವ ತೆರಿಗೆಯ ಹಣವನ್ನು ಬಿಟ್ಟು ಮಾಡುವ ಪ್ರತಿಯೊಂದು ಸಂದಾಯಕ್ಕೆ ತೆರಿಗೆಯ ಮೊಬಲಗನ್ನು ಹೊರತುಪಡಿಸಿ ಪ್ರವೇಶಕ್ಕಾಗಿ ಅಂಥ ಸಂದಾಯವು ಐವತ್ತು ರೂಪಾಯಿಗಳಿಗಿಂತ ಕಡಿಮೆ ಇರದೇ ಹೋದಲ್ಲಿ, ಶೇಕಡ 10ರ ದರದಂತೆ ಮನೋರಂಜನೆ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು;

ಪರಂತು ಪ್ರವೇಶದಾರನು ಭಾಗವಹಿಸುವುದನ್ನು ಒಳಗೊಳ್ಳದ ಸರ್ಕಸ್ ಅಥವಾ ನಾಟಕ ಅಥವಾ ಮ್ಯಾಜಿಕ ಷೋ ಅಥವಾ ಆಟ ಅಥವಾ ಕ್ರೀಡೆಗೆ ಪ್ರವೇಶ ನೀಡುವ ಸಂದರ್ಭದಲ್ಲಿ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ.

XX XX XX

4–ಜಿ ಮಲ್ಟಿ ಸಿಸ್ಟಂ ಆಪರೇಟರ್ ಮತ್ತು ಮನೆಗೇ ನೇರ ಸೇವೆ ಒದಗಿಸುವವರ (ಡಿಟಿಎಚ್) ಮೇಲೆ ತೆರಿಗೆ.– 4–ಸಿ ಮತ್ತು 4–ಡಿ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಕಾರ್ಯಕ್ರಮಗಳ ತಯಾರಿಕೆ ಮತ್ತು ಪ್ರಸರಣ ಮತ್ತು ಪ್ಯಾಕೇಜುಗಳು ಹಾಗೂ ಮನೆ ಮನೆಗೆ ನೇರ ಪ್ರಸಾರ ಸ್ಕೀಮ್ ಅಡಿಯಲ್ಲಿ ಟೆಲಿವಿಷನ್ ಸಿಗ್ನಲ್‌ಗಳನ್ನು ಒದಗಿಸುವ ಸಂಬಂಧದಲ್ಲಿ ಮನೆಗೆ ನೇರ ಪ್ರಸಾರ ಒದಗಿಸುವವನು ಒಳಗೊಂಡಂತೆ ಸೆಟ್‌ಲೈಟ್ ಟೆಲಿವಿಷನ್ ಸಿಗ್ನಲ್‌ಗಳ ಸ್ವೀಕರಣ ಸಂಪರ್ಕ ಜಾಲದ ಮೇಲೆ ಶೇಕಡ ಹತ್ತರ ದರದಂತೆ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು, ಹಾಗೆಯೇ ಇರಿಸಲಾದ ತೆರಿಗೆಯನ್ನು ಮಾಲೀಕನೇ ಸಂದಾಯ ಮಾಡತಕ್ಕದ್ದು;

ಪರಂತು, 2002ರ ಏಪ್ರಿಲ್ 1ನೇ ದಿನಾಂಕದಿಂದ 2006ರ ಮಾರ್ಚ್ 13ನೇ ದಿನಾಂಕದವರೆಗೆ ಈ ಪ್ರಕರಣದಡಿಯಲ್ಲಿ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ.

XX XX XX

6–ಎ ವಿವರಪಟ್ಟಿಕೆಗಳು.– (1) ಮನೋರಂಜನೆಯ ಪ್ರತಿಯೊಬ್ಬ ಮಾಲೀಕನು ಗೌರವಾರ್ಥ ಟಿಕೇಟುಗಳಿಗೆ ಮತ್ತು ಪ್ರವೇಶಕ್ಕಾಗಿನ ಸಂದಾಯಗಳಿಗೆ ಸಂಬಂಧಪಟ್ಟಂಥ ಅಂಥ ವಿವರ ಪಟ್ಟಿಕೆಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಪ್ರಾಧಿಕಾರಕ್ಕೆ ಒಪ್ಪಿಸತಕ್ಕದ್ದು;

ಪರಂತು, ಒಂದು ಪ್ರದರ್ಶನ ಅಥವಾ ಒಂದು ವಾರಕ್ಕಿಂತ ಕಡಿಮೆ ಅವಧಿಗೆ ನಡೆಸುವ ಮನೋರಂಜನೆಯ ಸಂಬಂಧದಲ್ಲಿ, ಮಾಲೀಕನು ಅಂಥ ಮನೋರಂಜನೆಯು ಮುಕ್ತಾಯವಾದ ಕೂಡಲೇ ನಿಯಮಿಸಬಹುದಾದಂಥ ವಿವರಪಟ್ಟಿಕೆಗಳನ್ನು ಸಲ್ಲಿಸತಕ್ಕದ್ದು.

XX XX XX

8–ಇ ಅಪೀಲು ನ್ಯಾಯಾಧೀಕರಣಕ್ಕೆ ಅಪೀಲು.– (1) ಈ ಬಗ್ಗೆ ರಾಜ್ಯ ಸರ್ಕಾರವು ಸಕ್ಷಮಗೊಳಿಸಿದ ಯಾವೊಬ್ಬ ಅಧಿಕಾರಿ ಅಥವಾ 8ಬಿ ಪ್ರಕರಣ ಅಥವಾ 8ಸಿ ಪ್ರಕರಣದ ಮೇರೆಗೆ ಜಂಟಿ ಆಯುಕ್ತನು ಮಾಡಿದ ಆದೇಶವನ್ನು ಆಕ್ಷೇಪಿಸುವ ಯಾವೊಬ್ಬ ಇತರ ವ್ಯಕ್ತಿಯು ಅವನಿಗೆ ಆ ಆದೇಶವನ್ನು ತಿಳಿಸಿದಂಥ ದಿನಾಂಕದಿಂದ ಅರವತ್ತು ದಿವಸಗಳ ಅವಧಿಯೊಳಗೆ ಕರ್ನಾಟಕ ಅಪೀಲು ನ್ಯಾಯಾಧಿಕರಣ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ, 10) ಮೇರೆಗೆ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು.

XX XX XX

ಕರ್ನಾಟಕ ವೃತ್ತಿಗಳ, ಕಸಬುಗಳ ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರ (ಕರ್ನಾಟಕ ಅಧಿನಿಯಮ ಸಂಖ್ಯೆ: 35) ಉದ್ಧೃತ ಭಾಗ

XX XX XX

5. ನೋಂದಣಿ ಮತ್ತು ದಾಖಿಲಾತಿ.– (1) 4ನೇ ಪ್ರಕರಣದ ಮೇರೆಗೆ ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾದ (ಸರ್ಕಾರಿ ಅಧಿಕಾರಿಯಾಗಿರದ) ಪ್ರತಿಯೊಬ್ಬ ನಿಯೋಜಕನು, ತೆರಿಗೆ ನಿರ್ಧರಣಾ ಪ್ರಾಧಿಕಾರದಿಂದ ನೋಂದಣಿ ಪ್ರಮಾಣಪತ್ರವನ್ನು ನಿಯಮಿಸಲಾದ ರೀತಿಯಲ್ಲಿ ಪಡೆಯತಕ್ಕದ್ದು.

XX XX XX

(4) ತೆರಿಗೆ ನಿರ್ಧರಣಾ ಪ್ರಾಧಿಕಾರವು ಪ್ರತಿಯೊಂದು ದಾಖಿಲಾತಿಯ ಪ್ರಮಾಣ ಪತ್ರದಲ್ಲಿ, ಅದನ್ನು ಹೊಂದಿರುವವನು ಅನುಸೂಚಿಗೆ ಅನುಸಾರವಾಗಿ ಸಂದಾಯ ಮಾಡಬೇಕಾದ ತೆರಿಗೆಯ ಮೊಬಲಗನ್ನು ಮತ್ತು ಅದನ್ನು ಯಾವ ದಿನಾಂಕದೊಳಗಾಗಿ ಸಂದಾಯ ಮಾಡಬೇಕೆಂಬುದನ್ನು ನಮೂದಿಸತಕ್ಕದ್ದು ಮತ್ತು ಅಂಥ ಪ್ರಮಾಣಪತ್ರವು 12ನೇ ಪ್ರಕರಣದ ಉದ್ದೇಶಗಳಿಗಾಗಿ ತಗಾದೆ ನೋಟೀಸಾಗಿರತಕ್ಕದ್ದು.

XX XX XX

6–ಎ. ಮುಂಗಡವಾಗಿ ತೆರಿಗೆಯನ್ನು ಸಂದಾಯ ಮಾಡುವುದು.– (1) ಈ ಅಧಿನಿಯಮದಡಿಯಲ್ಲಿ ನೋಂದಾಯಿತನಾದ ಪ್ರತಿಯೊಬ್ಬ ನಿಯೋಜಕನು, ಆ ತಿಂಗಳ ಹಿಂದಿನ ತಿಂಗಳ ಸಂಬಂಧದಲ್ಲಿ ತಾನು ಸಂದಾಯ ಮಾಡಿದ ಸಂಬಳ ಮತ್ತು ಭತ್ಯೆಗಳನ್ನು ಮತ್ತು ಕಡಿತಗೊಳಿಸುವ ತೆರಿಗೆಯ ಮೊತ್ತವನ್ನು ತೋರಿಸುವ

ನಿಯಮಿಸಲಾದ ನಮೂನೆಯಲ್ಲಿ ಒಂದು ವಿವರ ತ:ಖ್ತೆಯನ್ನು, ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ತಿಂಗಳು ಕೊನೆಗೊಳ್ಳುವ ಇಪ್ಪತ್ತು ದಿನಗಳೊಳಗೆ, ಸಲ್ಲಿಸತಕ್ಕದ್ದು;

ಪರಂತು, ಒಂದು ತಿಂಗಳಿನಲ್ಲಿ ಕಡಿತಗೊಳಿಸಲಾದ ತೆರಿಗೆಯ ಮೊತ್ತವು ಐದು ಸಾವಿರ ರೂಪಾಯಿಗಳು ಮೀರಿರದಿದ್ದಲ್ಲಿ, ನೋಂದಾಯಿತ ನಿಯೋಜಕನು, ಆ ಮೂರು ತಿಂಗಳ ಹಿಂದಿನ ತಿಂಗಳ ಸಂಬಂಧದಲ್ಲಿ ತಾನು ಸಂದಾಯ ಮಾಡಿದ ಸಂಬಳ ಮತ್ತು ಭತ್ಯೆಗಳನ್ನು ಮತ್ತು ಕಡಿತಗೊಳಿಸುವ ತೆರಿಗೆಯ ಮೊತ್ತವನ್ನು ತೋರಿಸುವ ನಿಯಮಿಸಲಾದ ನಮೂನೆಯಲ್ಲಿ ಒಂದು ವಿವರ ತ:ಖ್ತೆಯನ್ನು ಮೂರು ತಿಂಗಳು ಕೊನೆಗೊಳ್ಳುವ ಇಪ್ಪತ್ತು ದಿನಗಳೊಳಗೆ ಸಲ್ಲಿಸತಕ್ಕದ್ದು.

XX XX XX

7. ನಿಯೋಜಕನ ಅಥವಾ ವ್ಯಕ್ತಿಯ ತೆರಿಗೆ ನಿರ್ಧರಣೆ.– (1) ಯಾವೊಬ್ಬ ನಿಯೋಜಕನು ದಾಖಲು ಮಾಡಿದ ವಿವರ ಪಟ್ಟಿಕೆಯು ಸರಿಯಗಿದೆಯೆಂದು ಮತ್ತು ಪೂರ್ಣವಾಗಿದೆಯೆಂದು ತೆರಿಗೆ ನಿರ್ಧರಣ ಪ್ರಾಧಿಕಾರಕ್ಕೆ ಮನದಟ್ಟಾದರೆ, ಅದು ವಿವರಪಟ್ಟಿಕೆಯನ್ನು ಅಂಗೀಕರಿಸತಕ್ಕದ್ದು.

(2) (ಎ) ಯಾವೊಬ್ಬ ನಿಯೋಜಕನು ದಾಖಲುಮಾಡಿದ ವಿವರಪಟ್ಟಿಕೆಯು ಸರಿಯಾಗಿದೆಯೆಂದು ಮತ್ತು ಪೂರ್ಣವಾಗಿದೆಯೆಂದು ತೆರಿಗೆ ನಿರ್ಧರಣಾ ಪ್ರಾಧಿಕಾರಿಕೆ ಮನದಟ್ಟಾಗದಿದ್ದರೆ ಅದು ನಿಯೋಜಕನಿಗೆ ನೋಟೀಸನ್ನು ಜಾರಿಗೆ ಮಾಡತಕ್ಕದ್ದು ಮತ್ತು ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಖುದ್ದಾಗಿ ಅಥವಾ ತನ್ನ ಅಧಿಕೃತ ಪ್ರತಿನಿಧಿಯ ಮೂಲಕವಾಗಿ ಹಾಜರಾಗಲು ಮತ್ತು ವಿವರಪಟ್ಟಿಕೆಯ ಸಮರ್ಥನೆಗಾಗಿ ಲೆಕ್ಕಪತ್ರಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸಲು ಅಗತ್ಯಪಡಿಸತಕ್ಕದ್ದು.

(ಬಿ) ತೆರಿಗೆ ನಿರ್ಧರಣಾ ಪ್ರಾಧಿಕಾರವು, ಲೆಕ್ಕಪತ್ರಗಳನ್ನು ಮತ್ತು ಕಾಗದಪತ್ರಗಳನ್ನು ಪರೀಕ್ಷಿಸಿ ನಿಯೋಜಕನು ಸಂದಾಯ ಮಾಡಬೇಕಾದ ತೆರಿಗೆಯ ಮೊಬಲಗನ್ನು ನಿರ್ಧರಿಸತಕ್ಕದು.

(ಸಿ) ನೋಟೀಸಿನ ನಿಬಂಧನೆಗಳನ್ನು ಪಾಲಿಸಲು ನಿಯೋಜಕನು ತಪ್ಪಿದರೆ, ಅಥವಾ ಆ ಲೆಕ್ಕಪತ್ರಗಳು ಮತ್ತು ಕಾಗದಪತ್ರಗಳು ಸರಿಯಗಿಲ್ಲವೆಂದು ಅಥವಾ ಅಪೂರ್ಣವಾಗಿದೆ ಎಂದು ಅಥವಾ ನಂಬಲರ್ಹವಾಗಿಲ್ಲವೆಂದು ತೆರಿಗೆ ನಿರ್ಧರಣಾ ಪ್ರಾಧಿಕಾರವು ಅಭಿಪ್ರಾಯಪಟ್ಟರೆ, ಸದರಿ ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ಆನಂತರ, ಅಥವಾ ಅನ್ಯಥಾ, ಬಾಕಿಯಿರುವ ತೆರಿಗೆಯನ್ನು ತನ್ನ ಅತ್ಯುತ್ತಮ ವಿವೇಚನೆಗನುಸಾರವಾಗಿ ನಿರ್ಧರಿಸತಕ್ಕದು.

XX XX XX

21. ಲೆಕ್ಕಪತ್ರಗಳನ್ನು ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವುದು ಮತ್ತು ಪರಿಶೀಲಿಸುವುದು ಹಾಗೂ ಆವರಣಗಳನ್ನು ಶೋಧಿಸುವುದು.– ಈ

ಅಧಿನಿಯಮದ ಮೇರೆಗಿನ ಯಾವುದೇ ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ತೆರಿಗೆಗೆ ಬದ್ಧವಾಗಿರುವ ಯಾವುದೇ ವೃತ್ತಿಯನ್ನು, ಕಸಬನ್ನು, ಆಜೀವಿಕೆಯನ್ನು ಮತ್ತು ಉದ್ಯೋಗವನ್ನು ಯಾವ ಆವರಣಗಳಲ್ಲಿ ನಡೆಸಲಾಗುತ್ತಿದೆಯೋ ಅಥವಾ ನಡೆಸಲಾಗುತ್ತಿದೆ ಎಂದು ಶಂಕಿಸಬಹುದಾದ ಮತ್ತು ಅವುಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು, ರಿಜಿಸ್ಟರುಗಳನ್ನು, ಲೆಕ್ಕಪತ್ರಗಳನ್ನು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಹಾಗೂ ಪರೀಕ್ಷಿಸಲು ಅಗತ್ಯಪಡಿಸಬಹುದು ಮತ್ತು ಅವಶ್ಯವಾಗಬಹುದಾದಂಥ ಪುಸ್ತಕಗಳನ್ನು, ರಿಜಿಸ್ಟರುಗಳನ್ನು, ಲೆಕ್ಕಪತ್ರಗಳನ್ನು ಅಥವಾ ದಸ್ತಾವೇಜುಗಳನ್ನು ಅಭಿಗ್ರಹಿಸಿಕೊಳ್ಳಬಹುದು:

ಪರಂತು, ಸದರಿ ಪ್ರಾಧಿಕಾರವು ಸದರಿ ಆವರಣದಿಂದ ಯಾವುದೇ ಪುಸ್ತಕವನ್ನು ರಿಜಿಸ್ಟರನ್ನು, ಲೆಕ್ಕಪತ್ರವನ್ನು ಅಥವಾ ದಸ್ತಾವೇಜನ್ನು ಸ್ಥಳಾಂತರಿಸಿದರೆ, ತಾನು ಹಾಗೆ ಸ್ಥಳಾಂತರಿಸಿದ ಪುಸ್ತಕವನ್ನು, ರಿಜಿಸ್ಟರನ್ನು, ಲೆಕ್ಕಪತ್ರವನ್ನು ಅಥವಾ ದಸ್ತಾವೇಜನ್ನು ವಿವರಿಸುವ ರಸೀದಿಯನ್ನು ಆ ಸ್ಥಳದ ಆಡಳಿತವನ್ನು ಹೊಂದಿರುವ ವ್ಯಕ್ತಿಗೆ ಕೊಡತಕ್ಕದ್ದು ಮತ್ತು ಅದರ ಪರೀಕ್ಷೆಯ ಉದ್ದೇಶಗಳಿಗಾಗಿ ಅಥವಾ ಪ್ರಾಸಿಕ್ಯೂಷನ್ನಿಗಾಗಿ ಅವಶ್ಯವಾಗಬಹುದಾದಷ್ಟು ಕಾಲದವರೆಗೆ ಮಾತ ಅದನ್ನು ಇಟ್ಟುಕೊಳ್ಳತಕ್ಕದು.

XX XX XX

26. ಅಪರಾಧಗಳ ರಾಜಿ.– (1) ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟ ತೆರಿಗೆ ನಿರ್ಧರಣಾ ಪ್ರಾಧಿಕಾರವು, ಪ್ರಾಸಿಕ್ಯೂಷನ್ನನ್ನು ಹೂಡುವ ಮುಂಚೆಯಾಗಲಿ ಅಥವಾ ಆನಂತರವಾಗಲಿ, ಅಪರಾಧಕ್ಕಾಗಿ ಆರೋಪಿತನಾದ ಯಾವನೇ ವ್ಯಕ್ತಿಗೆ, ತೆರಿಗೆ ನಿರ್ಧರಣಾ ಪ್ರಾಧಿಕಾರವು ನಿರ್ಧರಿಸಬಹುಧಾದಂತೆ, ಆ ಅಪರಾಧಕ್ಕೆ ಸಂಬಂಧಿಸಿದ ತೆರಿಗೆಯ ಮೊಬಲಗಿನ ಎರಡರಷ್ಟನ್ನು ಸಂದಾಯಮಾಡಿದ ಮೇಲೆ, ಆ ಅಪರಾಧದ ಬಗ್ಗೆ ರಾಜಿಮಾಡಿಕೊಳ್ಳಲು ಅನುಮತಿಯನ್ನು ಕೊಡಬಹುದು.

XX XX XX

ಅನುಸೂಚಿ

[(3)(2)ನೇ ಪ್ರಕರಣವನ್ನು ನೋಡಿ)]

ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಿನ ತೆರಿಗೆಯ ದರಗಳು

ಕ್ರಮ ಸಂಖ್ಯೆ	ವ್ಯಕ್ತಿಗಳ ವರ್ಗ	ತೆರಿಗೆಯ ದರ
1	2	3
1	ಕೆಳಗಿನ ವರ್ಗಗಳಿಗೆ ಸೇರುವ ಸಂಬಳ ಅಥವಾ ಮಜೂರಿ ಪಡೆಯುವವರು,–	

	(ಎ) (ಬಿ) ರೂ. 5000/– ಗಳಿಗಿಂತ ಕಡಿಮೆಯಿಲ್ಲದ ಆದರೆ ರೂ. 8000/– ಗಳಿಗಿಂತ ಕಡಿಮೆ (ಸಿ) ರೂ. 8000/– ಗಳಿಗಿಂತ ಕಡೆಮೆಯಲ್ಲದ ಆದರೆ ರೂ. 10000/– ಗಳಿಗಿಂತ ಕಡಿಮೆ	ತಿಂಗಳಿಗೆ ರೂ. 60/– ತಿಂಗಳಿಗೆ ರೂ. 100/–

XX XX XX

ಕರ್ನಾಟಕ ಭೋಗ ವಸ್ತುಗಳ ಮೇಲಣ ತೆರಿಗೆ ಅಧಿನಿಯಮ, 1979(1979ರ ಕರ್ನಾಟಕ ಅಧಿನಿಯಮ, 22)ರ ಉದ್ಧೃತ ಭಾಗ.

XX XX XX

3. ಹೋಟೆಲಿನಲ್ಲಿ ಒದಗಿಸಲಾದ ಭೋಗವಸ್ತುಗಳ ಮೇಲೆ ತೆರಿಗೆ ವಿಧಿಸುವಿಕೆ ಮತ್ತು ಸಂಗ್ರಹಣೆ.–(1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಹೋಟೆಲಿನಲ್ಲಿ ಪ್ರತಿಯೊಂದು ಕೊಠಡಿಗೆ ಸಂಬಂಧಿಸಿದಂತೆ, ಒದಗಿಸಿದ ಭೋಗವಸ್ತುವಿನ ಮೇಲೆ ಈ ಕೆಳಕಂಡ ದರಗಳಲ್ಲಿ (ಭೋಗವಸ್ತುವಿನ ತೆರಿಗೆ ಎಂದು ಕರೆಯಲಾಗುವ) ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು, ಎಂದರೆ:–

(ಎ)	ಪ್ರತಿ ಕೊಠಡಿಗೆ ಪ್ರತಿದಿನಕ್ಕೆ ವಸತಿಗಾಗಿ ಚಾರ್ಜುಗಳ ಒಂದುನೂರು ರೂಪಾಯಿಗಳಿಗಿಂತ ಹೆಚ್ಚಾಗಿದ್ದು ಆದರೆ ನಾಲ್ಕು ನೂರು ರೂಪಾಯಿಗಳಿಗಿಂತ ಕಡಿಮೆಯಾಗಿರುವಲ್ಲಿ,;	ಅಂಥಾ ಚಾರ್ಜುಗಳ ಶೇಕಡಾ ನಾಲ್ಕರಷ್ಟು
(ಬಿ)	ಪ್ರತಿ ಕೊಠಡಿಗೆ ಪ್ರತಿದಿನಕ್ಕೆ ವಸತಿಗಾಗಿ ಚಾರ್ಜುಗಳ ನಾಲ್ಕು ನೂರು ರೂಪಾಯಿಗಳಿಗಿಂತ ಕಡಿಮೆಯಲ್ಲದ ಆದರೆ ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಾಗಿರುವಲ್ಲಿ	ಅಂಥಾ ಚಾರ್ಜುಗಳ ಶೇಕಡ ಎಂಟರಷ್ಟು
(ಸಿ)	ಪ್ರತಿ ಕೊಠಡಿಗೆ ಪ್ರತಿದಿನಕ್ಕೆ ವಸತಿಗಾಗಿನ ಚಾರ್ಜುಗಳ ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಾಗಿರದಿದ್ದಲ್ಲಿ	ಅಂಥಾ ಚಾರ್ಜುಗಳ ಶೇಕಡ ಹನ್ನೆರಡುವರೆರಷ್ಟು

ಪರಂತು, ವಸತಿ ಚಾರ್ಜುಗಳನ್ನು ದಿವಸದ ಆಧಾರದ ಮೇಲೆ ಅಲ್ಲದೆ ಸಂದಾಯ ಮಾಡಬೇಕಾಗಿರುವಲ್ಲಿ, ಆಗ, ಈ ಪ್ರಕರಣದ ಮೇರೆಗೆ ತೆರಿಗೆಯ 'ಹೊಣೆಗಾರಿಕೆಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಆ ಚಾರ್ಜುಗಳನ್ನು ಯಾವ ವಸತಿಯ ಅವಧಿಗಾಗಿ ಆ ಚಾರ್ಜುಗಳು ಸಂದಾಯವಾಗಬೇಕಾಗಿದೆಯೋ ಆ ವಸತಿಯ ಅವಧಿಯ ಮೇಲೆ ಆಧಾರಿಸಿದ ದಿವಸಕ್ಕೆಂದು ಲೆಕ್ಕ ಹಾಕತಕ್ಕದ್ದು;

ಮತ್ತು, ಪರಂತು ಭಾರತದಲ್ಲಿ ವಿದೇಶಿ ರಾಜತಾಂತ್ರಿಕ ನಿಯೋಗದ ಸದಸ್ಯನಾಗಿರುವ ಯಾವನೇ ವ್ಯಕ್ತಿಯು ವಸತಿಗಾಗಿ ಯಾವುವೇ ಚಾರ್ಜುಗಳನ್ನು ಸಂದಾಯ ಮಾಡಿದಲ್ಲಿ, ಆಗ ಅಂಥ ವ್ಯಕ್ತಿಯು ತೆರಿಗೆಯ ಸಂದಾಯದಿಂದ ವಿನಾಯಿತಿಯನ್ನು ಹೊಂದಿರತಕ್ಕದ್ದು:

3ಬಿ. ಆರೋಗ್ಯ, ಕ್ಲಬ್, ಮುಂತಾದ ಭೋಗವಸ್ತುಗಳ ಮೇಲೆ ತೆರಿಗೆ:– ನಿವಾಸಿಗಳಿಗೆ ಇತರರಿಗೆ ಹೋಟೆಲುಗಳಲ್ಲಿ ಒದಗಿಸಲಾಗುವ ಆರೋಗ್ಯ ಕ್ಲಬ್, ಬ್ಯೂಟಿ ಪಾರ್ಲರ್, ಈಜುಕೊಳ, ಸಭಾಂಗಣಗಳು ಮತ್ತು ಅಂತಹುದೇ ಇತರ ಭೋಗ ವಸ್ತುಗಳ ಮೇಲೆ ಪ್ರತ್ಯೇಕವಾಗಿ ಚಾರ್ಜುಗಳನ್ನು ವಸೂಲು ಮಾಡಿದಾಗ, ಹಾಗೆ ವಸೂಲು ಮಾಡಲಾದ ಚಾರ್ಜುಗಳ ಮೇಲೆ ಶೇಕಡ ಇಪ್ಪತ್ತರ ದರದಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ವಸೂಲು ಮಾಡತಕ್ಕದ್ದು.

3ಸಿ. ಕಲ್ಯಾಣ ಮಂಟಪಕ್ಕೆ ವಿಧಿಸುವ ಶುಲ್ಕಗಳ ಬಗ್ಗೆ ತೆರಿಗೆ ವಿಧಿಸುವುದು ಮತ್ತು ಸಂಗ್ರಹಣ ಮಾಡುವುದು.– ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಕಲ್ಯಾಣಮಂಟಪದಲ್ಲಿ ಒದಗಿಸಲಾಗುವ ಭೋಗ ವಸ್ತುಗಳಿಗೆ ವಿಧಿಸುವ ಶುಲ್ಕ ದಿನಕ್ಕೆ ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದಿದ್ದರೆ ಅಂಥ ಶುಲ್ಕದ ಮೇಲೆ ಶೇಕಡ 20 ದರದಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಣ ಮಾಡತಕ್ಕದ್ದು;

ಪರಂತು ಕಲ್ಯಾಣ ಮಂಟಪಕ್ಕೆ ಚಾರ್ಜುಗಳನ್ನು ಪ್ರತಿ ದಿನದ ಆಧಾರದ ಮೇಲಲ್ಲದೆ ಅನ್ಯಥಾ ಸಂದಾಯ ಮಾಡುವಂತಿದ್ದರೆ, ಆಗ, ಈ ಪ್ರಕರಣದಡಿ ತೆರಿಗೆ ಬಾಧ್ಯತೆಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ಅದನ್ನು ಬಳಸಿಕೊಳ್ಳುವ ಅವಧಿಗಾಗಿ ಚಾರ್ಜುಗಳನ್ನು ಸಂದಾಯ ಮಾಡುವುದರ ಆಧಾರದ ಮೇಲೆ, ದಿನವೊಂದಕ್ಕೆ ಎಂಬಂತೆ ಚಾರ್ಜುಗಳನ್ನು ಲೆಕ್ಕ ಹಾಕತಕ್ಕದ್ದು.

4. ತೆರಿಗೆ ಸಂಗ್ರಹಣಾ ವಿಧಾನ.– (1) ಹೋಟೆಲಿನಲ್ಲಿ ಒದಗಿಸಿದ ಭೋಗವಸ್ತುವಿಗಾಗಿನ ಚಾರ್ಜುಗಳ ದರವು, ಆಹಾರ ಅಥವಾ ಪಾನೀಯ ಅಥವಾ ಇತರ ಸೌಕರ್ಯಗಳು ಯಾವುದಾದರೂ ಇದ್ದರೆ ಅವುಗಳನ್ನು (2ನೇ ಪ್ರಕರಣದ (5)ನೇ ಖಂಡದಲ್ಲಿ ಉಲ್ಲೇಖಿಸಲಾದ ಸೌಕರ್ಯಗಳು ಆಗಿರುವುವು) ಅವುಗಳನ್ನು ಒಳಗೊಂಡಿರುವಲ್ಲಿ ಆಗ ಭೋಗವಸ್ತು ತೆರಿಗೆ ಅಧಿಕಾರಿಯು ಕಾಲಕಾಲಕ್ಕೆ ಮಾಲೀಕನಿಗೆ ಅವನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟು ತರುವಾಯ, ಈ ಅಧಿನಿಯಮದ ಮೇರೆಗೆ ತೆರಿಗೆಯನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಅಂಥ ಭೋಗವಸ್ತುಗಳಿಗಾಗಿ ಮತ್ತು 2ನೇ ಪ್ರಕರಣದ (5)ನೇ ಖಂಡದಲ್ಲಿ ಉಲ್ಲೇಖಿಸಿದ ಸೌಕರ್ಯಗಳಾಗಿರುವ ಆಹಾರ ಅಥವಾ ಪಾನೀಯ ಅಥವಾ ಇತರ ಸೌಕರ್ಯಗಳು ಯಾವುದಾದರೂ ಇದ್ದರೆ ಅವುಗಳಿಗಾಗಿ ಚಾರ್ಜುಗಳ ಪ್ರತ್ಯೇಕ ದರಗಳನ್ನು ನಿಗದಿಪಡಿಸಬಹುದು.

XX XX XX

(3) (ಹೋಟೆಲಿನ ನಿಯೋಜಿತನಾಗಿರದ) ಹೋಟೆಲಿನಲ್ಲಿ ಯಾವನೇ ವ್ಯಕ್ತಿಗೆ ಒದಗಿಸಿದ ಭೋಗವಸ್ತುವಿಗೆ ಚಾರ್ಜು ಮಾಡದಿರುವಲ್ಲಿ ಅಥವಾ ರಿಯಾಯಿತಿ ದರದಲ್ಲಿ ಚಾರ್ಜು ಮಾಡಿರುವಲ್ಲಿ ಆಗ ಅಂತ ಭೋಗವಸ್ತುವಿನ ಮೇಲಿನ ತೆರಿಗೆಯನ್ನು ಅಂಥ ಭೋಗ ವಸ್ತುವಿಗಾಗಿ ಪೂರ್ಣ ಚಾರ್ಜುಗಳನ್ನು ಮಾಡಿದ್ದಿದ್ದರೆ ಹೇಗೋ ಹಾಗೆ ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

XX XX XX

12ಎ. ತೆರಿಗೆ ವಿನಾಯಿತಿ ನೀಡಲು ಅಥವಾ ಕಡಿಮೆ ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರ.– ರಾಜ್ಯ ಸರ್ಕಾರವು, ನಿರ್ದಿಷ್ಟ ವರ್ಗದ ಹೋಟೆಲ್‌ಗಳ ಅಥವಾ ನಿರ್ದಿಷ್ಟ ವರ್ಗದ ದಾಸ್ತಾನುದಾರರ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಗೆ ವಿನಾಯಿತಿ ನೀಡುವುದು ಅಥವಾ ಅದನ್ನು ಕಡಿಮೆ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವೆಂದು ಅಭಿಪ್ರಾಯಪಟ್ಟರೆ, ಅಧಿಸೂಚನೆಯ ಮೂಲಕ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಮತ್ತು ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ ಒಳಪಟ್ಟು ಹಾಗೆ ಮಾಡಬಹುದು.

XX XX XX

ಅನುಬಂಧ – 4

ಕರ್ನಾಟಕದ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 23)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 35) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನುಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.